ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 20-09-2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ:104 (ಹಳೆ ನಂ.83)ರ ವಾರ್ಡ್ ಕಮಿಟಿ ಸಭೆಯನ್ನು ಹೋಟೇಲ್ ಶ್ರೀನಿಧಿ, ಹೋಫ್ ಫಾರಂ ವೃತ್ತ ಇಲ್ಲಿ ಶ್ರೀ.ಶ್ರೀನಿಧಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

- ಶ್ರೀ.ಶ್ರೀನಿಧಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
- ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು.
- ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ಬಿಬಿಎಂಪಿ
- ಶ್ರೀ.ಸಂಧೀಪ್ ಕುಮಾರ್.ಎಲ್, ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ
- ಶ್ರೀ.ಶಿವರಾಜ್, ಎ.ಎಸ್.ಐ, ಕಾಡುಗುಡಿ ಪೊಲೀಸ್ ಠಾಣೆ
- ಶ್ರೀ.ವಿ.ರವಿಚಂದ್ರ, ಎ.ಇ, ಮೇಜರ್ ರೋಡ್ಸ್
- ಶ್ರೀ.ರವಿಕುಮಾರ್, ಎ.ಇ, ಬಿ.ಡಬ್ಲ್ಯೂ.ಎಸ್.ಎಸ್.ಬಿ
- ಶ್ರೀ.ಶಿವರಾಜ್‌ಕುಮಾರ್ ಅಂಗಡಿ, ಪಿ.ಎಸ್.ಐ. ಟ್ರಾಫಿಕ್, ವೈಟ್‌ಫೀಲ್ಡ್
- ಶ್ರೀ.ಪೀರ್‌ಪಾಷ, ಪಿ.ಸಿ, ಕಾಡುಗುಡಿ ಪೊಲೀಸ್ ಠಾಣೆ,
- ಶ್ರೀ.ಚನ್ನಬಸಪ್ಪ, ಎ.ಎಸ್.ಐ. ಕಾಡುಗುಡಿ ಪೊಲೀಸ್ ಠಾಣೆ,
- ಪ್ರಭುದಾಸ್, ಜೆ.ಹೆಚ್.ಐ, ಕಾಡುಗುಡಿ
- ಶ್ರೀ.ವೆಂಕಟೇಶ್.ಕೆ.ಆರ್, ವಾರ್ಡ್ ಮಾರ್ಷಲ್

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

| | |
|---|---|
| 1. ಮಾರಪ್ಪ | 7. ನಾನಿ.ಬಿ |
| 2. ಮಹಂತೇಶ್ ಗೌಡ | 8. ಎಂ.ಸಂಪಂಗಿ |
| 3. ರೋಮ | 9. ಮುರಳಿದರ್ |
| 4. ಹೆಚ್.ಎಲ್.ವೆಂಕಟೇಶ್ | 10. ಎನ್.ಚಂದ್ರಶೇಖರ್ |
| 5. ಸುಮನ್ ಸೇನಾಪತಿ | 11. ಅರುಣ್ ಕುಮಾರ್ |
| 6. ರವಿಕಾಂತ್.ವಿ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು - ಬಿ.ಬಿ.ಎಂ.ಪಿ, ಎ.ಇ.-ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಸಭೆಗೆ ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಸಾರ್ವಜನಿಕರು ರವರು ಚನ್ನಸಂದ್ರ ಮುಖ್ಯರಸ್ತೆಯ ನದಿ ಸೇತುವೆಯ ರಸ್ತೆ ಬದಿಯಲ್ಲಿ ಮಣ್ಣನ್ನು ಸುರಿದಿರುವುದು ಕಂಡುಬಂದಿದ್ದು, ಸದರಿ ಮಣ್ಣನ್ನು ತೆರವುಗೊಳಿಸಬೇಕೆಂದು ಕೋರಿದರು.
   - ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸುರಿದಿರುವ ಮಣ್ಣು ಬೃಹತ್ ರಾಜಕಾಲುವೆ, ಬಿಬಿಎಂಪಿ.ಗೆ ಸಂಬಂಧಪಟ್ಟಿದ್ದು, ಸದರಿಯವರು ರಾಜಕಾಲುವೆಗೆ ಒತ್ತುವರಿಯಾಗಿ ಕಟ್ಟಿರುವ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಕ್ರಮದಲ್ಲಿ ತೊಡಗಿರುವುದರಿಂದ, ಸದರಿಯವರಿಗೆ ವಿಷಯವನ್ನು ತಿಳಿಸಲಾಗುವುದು ಎಂದು ವಾರ್ಡ್ ಸಹಾಯಕ ಅಭಿಯಂತರರು ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಮುಖ್ಯರಸ್ತೆಯ ಸೇತುವೆಯ ಮಟ್ಟವು ಕಡಿಮೆ ಇರುವುದು ಕಂಡುಬಂದಿರುತ್ತದೆ. ಇದಕ್ಕೆ ಕಾರಣವೇನು? ಎಂದು ಕೋರಿದರು.
   - ಸದರಿ ವಿಷಯಕ್ಕೆ ಶ್ರೀ.ರವಿ, ಮೇಜರ್ ರೋಡ್ಸ್ ರವರು ಪ್ರತಿ ವರ್ಷ ಬೀಳುವ ಮಳೆಗಿಂತ ಈ ವರ್ಷ ಅತಿ ಹೆಚ್ಚು ಮಳೆಯಾಗಿರುವುದರಿಂದ, ನೀರಿನ ಮಟ್ಟವು ಹೆಚ್ಚಾಗಿರುತ್ತದೆ. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಗಮನ ಹರಿಸಲಾಗುವುದು.
4. ಸಭೆಯಲ್ಲಿ ಸಾರ್ವಜನಿಕರು ಎಫ್.ಸಿ.ಐ ಗೋಡೌನ್ ರಸ್ತೆಯಲ್ಲಿ ಕೆಲವು ವಾಹನಗಳನ್ನು ಸುಮಾರು ದಿನಗಳಿಂದ ನಿಲುಗಡೆ ಮಾಡಿದ್ದು, ರಸ್ತೆಯಲ್ಲಿ ಹಾದು ಹೋಗುವ ಇನ್ನಿತರೆ ವಾಹನಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ. ಇದನ್ನು ಸರಿಪಡಿಸುವಂತೆ ಕೋರಿದರು.
   - ಸದರಿ ವಿಷಯಕ್ಕೆ ಟ್ರಾಫೀಕ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಸದರಿ ವಾಹನಗಳಿಗೆ ದಂಡವನ್ನು ವಿಧಿಸಿ, ಸರಿಪಡಿಸುವುದಾಗಿ ತಿಳಿಸಿದರು.
5. ಸಭೆಯಲ್ಲಿ ಸಾರ್ವಜನಿಕರು, ಚನ್ನಸಂದ್ರ ಸರ್ಕಲ್ ಬಳಿ ಇರುವ ಕೋಳಿ ಮಾಂಸದ ಅಂಗಡಿಯವರು ಕೋಳಿ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಎಸೆಯುತ್ತಿರುವುದು ಕಂಡುಬಂದಿದ್ದು, ಇದರಿಂದ, ಮಾರಕ ರೋಗ ಹರಡುವ ಬೀತಿ ಇರುವ ಬಗ್ಗೆ ತಿಳಿಸಿದರು.
   - ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಶ್ರೀ.ಲೋಕೇಶ್ Asst.Director, Animal Husbandry ಮಹದೇವಪುರ ವಲಯ ರವರಿಗೆ ತಿಳಿಸುವುದಾಗಿ ಹೇಳಿದರು.
6. ಸಭೆಯಲ್ಲಿ ಸಾರ್ವಜನಿಕರು Govt.Polytechnic College ಎದುರು, ರಸ್ತೆಯಲ್ಲಿ sanitary Camberನಿಂದ ನೀರು ಹೊರಗೆ ಚಿಮ್ಮುತ್ತಿದ್ದು, ಸದರಿ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಿ ಕೊಡಲು ಕೋರಿದರು.
   - ಸದರಿ ವಿಷಯಕ್ಕೆ ಶ್ರೀ.ರವಿಕುಮಾರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸರಿಪಡಿಸಿಕೊಡುವುದಾಗಿ ತಿಳಿಸಿದರು.
7. ಸಭೆಯಲ್ಲಿ ಶ್ರೀ.ಮಾರಪ್ಪ ರವರು ದಿನಾಂಕ: 05-10-2022 ರಂದು ಅಂಬೇಡ್ಕರ್‌ಗುಟ್ಟದ ಅಂಬೇಡ್ಕರ್ ಮೈದಾನದಲ್ಲಿ ದಸರಾ ಹಬ್ಬವನ್ನು ಆಚರಿಸುತ್ತಿದ್ದು, ಸದರಿ ಜಾತ್ರೆಗೆ ಸಂಬಂಧಿಸಿದಂತೆ, ಜಾತ್ರೆಯ ಮೈದಾನ, ಇನ್ನಿತರೆ ರಸ್ತೆಗಳನ್ನು ಸರಿಪಡಿಸಿ ಕೊಡಬೇಕೆಂದು ಕೋರಿದರು.
   - ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಸರಿಪಡಿಸಿಕೊಳ್ಳುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ವೆಂಕಟೇಶ್)
ಸಹಾಯಕ ಅಭಿಯಂತರರು
ವಾರ್ಡ್ ನಂ: 104 ಕಾಡುಗುಡಿ

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ